Form No.4 (Civil)
Deposition
Sheets
(R.P.No.57)

# ವಿಶೇಷ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ, ಯಾದಗಿರಿ

## ಸ್ಪೆಷಲ್.ಸಿ. ಸಂಖ್ಯೆ: 41/2016

ಪ್ರಾ.ಸಾ. 2 ಚಾ.ಸಾ. 2

| | | |
|---|---|---|
| ಹೆಸರು | : | ಎನ್. ಬಸವರಾಜ |
| ತಂದೆಯ ಹೆಸರು | : | ಪಿರಪ್ಪ |
| ವಯಸ್ಸು | : | 43 ವರ್ಷ |
| ಉದ್ಯೋಗ | : | ಪ್ರ.ದ.ಸ. ಉಪ- ಕೃಷಿ ನಿರ್ದೇಶಕರ ಕಛೇರಿ ಯಾದಗಿರಿ |
| ವಾಸ | : | ಯಾದಗಿರಿ |

**ಪ್ರಮಾಣ ವಚನ ಭೋಧಿಸಿದ ದಿನಾಂಕ: 05-07-2024**
**ಮುಖ್ಯ ವಿಚಾರಣೆ ವಿಶೇಷ ಸರಕಾರಿ ಅಭಿಯೋಜಕರಿಂದ**

ನಾನು 2014 ರಿಂದ 2021ರ ವರೆಗೆ ನಾನು ಜಂಟಿ - ಕೃಷಿ ನಿರ್ದೇಶಕರ ಕಛೇರಿ ಯಾದಗಿರಿಯಲ್ಲಿ ಪ್ರ.ದ.ಸ. ನಾಗಿ ಕರ್ತವ್ಯನಿರ್ವಹಿಸಿರುತ್ತೇನೆ.

2. ದಿ: 28-02-2015 ರಂದು ಲೋಕಾಯಕ್ತ ಪೊಲೀಸರ ಪತ್ರದ ಕೋರಿಕೆಯ ಮೇರೆಗೆ ನಮ್ಮ ಮೇಲಾಧಿಕಾರಿಗಳ ಮೌಖಿಕ ನಿರ್ದೇಶನದ ಮೇರೆಗೆ ಬೆಳಿಗ್ಗೆ 11-30 ಗಂಟೆಗೆ ಲೋಕಾಯಕ್ತ ಕಛೇರಿಗೆ ಹಾಜರಾಗಿರುತ್ತೇನೆ. ನನ್ನ ಜೊತೆ ಲೋಕಾಯುಕ್ತ ಕಛೇರಿಗೆ ಪ್ರವಿಣಕುಮಾರ ತಂದೆ ಅಶೋಕ ಸಿಂದೆ ಸಹ ಹಾಜರಾದರು. ಸದರಿ ಪತ್ರವನ್ನು ನಿ.ಪಿ.28 ಎಂದು ಗುರುತಿಸಲಾಯಿತು. ಲೋಕಾಯುಕ್ತ ಕಛೇರಿಯಲ್ಲಿ ಇನ್ಸಪೇಕ್ಟರ ಬಿ.ವಿ. ಪಟೇಲ ಅವರು ನಮ್ಮಗಳನ್ನು ಪರಸ್ಪರ ಪರಿಚಯಿಸಿದರು. ದೂರುದಾರ ರಂಗಪ್ಪ ಅವರನ್ನು ಪರಿಚಯಿಸಿದರು. ಅವರ ದೂರಿನ ಮೇರೆಗೆ ನಿಮ್ಮನ್ನು ಪಂಚರಾಗಿ ಕರೆಸಿಕೊಂಡಿದ್ದೇವೆ ಎಂದು ತಿಳಿಸಿದರು. ಅದಕ್ಕೆ ನಾವು ಒಪ್ಪಿದೆವು. ನಂತರ ಫಿರ್ಯಾದಿದಾರರಿಗೆ ಮಾತನಾಡಿಸಿ ಅವರ ಮೊಬೈಲನಲ್ಲಿ ದಾಖಲಾಗಿದ್ದ ಧ್ವನಿಯನ್ನು ಕೇಳಿಸಿಕೊಂಡೆವು. ಮಾಳಪ್ಪ ಆರೋಪಿ ಅವರು 5000/- ರೂಪಾಯಿ ಲಂಚವನ್ನು ಲಕ್ಷ್ಮಿಬಾಯಿ ಅವರ ಹೊಲ ಮಾರುವ ವಿಷಯದಲ್ಲಿ ನಕ್ಷೆ ತಯಾರಿಸಿಕೊಡಲು ಕೇಳಿದ್ದು ಅದರಲ್ಲಿ 2000/- ರೂಪಾಯಿಗಳನ್ನು ಕೊಟ್ಟಿದ್ದು ಉಳಿದ 3000/- ರೂಪಾಯಿಗಳನ್ನು ಕೊಡುವದಾಗಿ ಹೇಳಿದ್ದಾಗಿ ತಿಳಿಸಿದರು. ಸದರಿ ಸಂಭಾಷಣೆಯನ್ನು ಕೇಳಿಸಿ ಲೋಕಾಯಕ್ತ ಸಿಬ್ಬಂದಿಯವರ ಕೈಯಿಂದ ಬರೆಯಿಸಿದರು. ಸದರಿ ಸಂಭಾಷಣೆಯನ್ನು ಈಗಾಗಲೇ ನಿ.ಪಿ.19 ಎಂದು ಗುರುತಿಸಲಾಗಿದ್ದು ಸಾಕ್ಷಿಯ

ಸಹಿಯನ್ನು ನಿ.ಪಿ.19(ಎ) ಎಂದು ಗುರುತಿಸಲಾಯಿತು. ಸದರಿ ಸಂಭಾಷಣೆಯನ್ನು ಕಂಪ್ಯೂಟರದಿಂದ ಸಿ.ಡಿ.ಗೆ ವರ್ಗಾಯಿಸಿದರು. ಅದನ್ನು ಕಾಕಿ ಕವರನಲ್ಲಿ ಹಾಕಿ ಜೆ.ಬಿ. ಎಂಬ ಅಕ್ಷರದಿಂದ ಸೀಲ್ ಮಾಡಿದರು. ಸದರಿ ಸಿ.ಡಿ.ಯನ್ನು ನೋಡಿದರೆ ಗುರುತಿಸುತ್ತೇನೆ. ನಂತರ ಪಿಐ ಅವರು ಫಿರ್ಯಾದಿಗೆ ನೀವು ತಂದಿರುವ ಹಣವನ್ನು ಕೊಡಿ ಎಂದು ಕೇಳಿದ್ದು ಅದರಂತೆ ಫಿರ್ಯಾದಿ 500/- ರೂಪಾಯಿ ಮುಖ ಬೆಲೆಯ 6 ನೋಟುಗಳನ್ನು ಒಟ್ಟು 3,000/- ರೂಪಾಯಿ ಮತ್ತೊಬ್ಬ ಪಂಚ ಪ್ರವಿಣ ಕುಮಾರ ಕೈಯಲ್ಲಿ ಕೊಟ್ಟು ಪರಿಶೀಲನೆ ಮಾಡುವಂತೆ ಹೇಳಿದರು. ಆ ನೋಟುಗಳು ಸರಿಯಾಗಿವೆ ಎಂದು ಹೇಳಿದರು. ಸದರಿ ನೋಟುಗಳ ನಂಬರ ಮತ್ತು ಮೌಲ್ಯವನ್ನು ಪ್ರವಿಣಕುಮಾರ ಹೇಳಿದಂತೆ ನಾನು ಬರೆದುಕೊಂಡೆ ಸದರಿ ದಾಖಲೆಯನ್ನು 29 ಎಂದು ಸಾಕ್ಷಿಯ ಸಹಿಯನ್ನು ನಿ.ಪಿ.29(ಎ) ಎಂದು ಗುರುತಿಸಲಾಯಿತು. ಸದರಿ ನೋಟುಗಳನ್ನು ನೋಡಿದರೆ ಗುರುತಿಸುತ್ತೇನೆ. ಮು.ಮಾ.1 ನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾರೆ.

ಸಾಕ್ಷಿಯ ಕೋರಿಕೆಯ ಮೇರೆಗೆ ಮುಂದುವರೆದ ಮುಖ್ಯ ವಿಚಾರಣೆಗಾಗಿ ಮುಂದೂಡಲಾಯಿತು.

(ನನ್ನ ಉಕ್ತ ಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಿದೆ)

ಓ.ಹೇ.ಕೆ.ಸ. ಇದೆ.

ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಯಾದಗಿರಿ.